

ಮತ್ತೆ ವಿತ್ತ ಸಚಿವರಾಗಿ ಇದೇ ತಿಂಗಳು ಜೇಟ್ಲಿ ಅಧಿಕಾರ ಸ್ವೀಕಾರ 9

3 ಲಕ್ಷ ಜೀವವುಳಿಸಿದ ಸ್ವಚ್ಛ ಭಾರತ : ವಿಶ್ವ ಆರೋಗ್ಯ ಸಂಸ್ಥೆ 10

ಮಹಿಳಾ ಭದ್ರತೆ ಕೇಂದ್ರ 9 ಬಿಗಿ ಕ್ರಮ

3 ಭಾರತ-ಇಂಗ್ಲೆಂಡ್ ಟೆಸ್ಟ್: ಇಶಾಂತ್‌ಗೆ ಐದು ವಿಕೆಟ್

ಮಂಗಳೂರು
ಶನಿವಾರ
4 ಆಗಸ್ಟ್ 2018
ವಿಲಂಬಿ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ ನಕ್ಷತ್ರ: ಅಶ್ವಿನಿ
ಬೆಲೆ ₹ 5.00

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ HD

ಸಂಪುಟ 40, ಸಂಚಿಕೆ 139, ಪುಟಗಳು 12+4 ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at kodi




ಇದು ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಹೆಗ್ಗಳಿಕೆ । ಸರಳ ರೀತಿಯ ಕನ್ನಡಕ

## ದೃಷ್ಟಿಹೀನರ ಪಾಲಿನ ಆಪ್ತಮಿತ್ರ ವಿಎಲ್ ಗ್ಲಾಸ್



ದಿಗಂತ ಚಿತ್ರ



ದಿಗಂತ ವರದಿ, ಮಂಗಳೂರು: ಆ.3

ಸಹ್ಯಾದ್ರಿ ಇನ್ನೋವೇಶನ್ ಹಬ್‌ನಿಂದ ಪ್ರಾಯೋಜಿತ ತಂತ್ರಜ್ಞಾನ ಸಂಸ್ಥೆ ಆರ್‌ಡಿಎಲ್ ಟೆಕ್ನಾಲಜೀಸ್ ವಿಎಲ್‌ಸಿ ಲ್ಯಾಬ್ ಹೊಂದಿದೆ. ಪ್ರಸ್ತುತ ಲ್ಯಾಬ್ ಬೆಳಕಿನ ಆವರ್ತಗಳನ್ನೇ ಅವಲಂಬಿಸಿ ಅಪಾಯಕಾರಿ ಆರ್‌ಎಫ್ ತರಂಗಗಳ ವಿಕಿರಣಗಳನ್ನು ನಿವಾರಿಸಿ ಸಂಶೋಧಿಸಿದ ತಂತ್ರಜ್ಞಾನವೇ ಎಲ್‌ಐಎಫ್‌ಐ ಆಗಿದೆ. ಈ ತಂತ್ರಜ್ಞಾನದಿಂದ ದೃಷ್ಟಿಹೀನ ವ್ಯಕ್ತಿಗಳಿಗಾಗಿ 'ವಿಎಲ್ ಗ್ಲಾಸ್'ನ್ನು ಆವಿಷ್ಕರಿಸುವ ಮೂಲಕ ಅಂಧರ ಬದುಕಿಗೆ ಕನ್ನಡಿಯಾಗುವಲ್ಲಿ ಸಹ್ಯಾದ್ರಿಯ ಇನ್ನೋವೇಶನ್ ಹಬ್ ಯಶಸ್ವಿಯಾಗಿದೆ.

ಆರ್‌ಡಿಎಲ್ ಟೆಕ್ನಾಲಜೀಸ್ ಮುಖ್ಯಸ್ಥ ರಾಘವ ಶೆಟ್ಟಿ ಶುಕ್ರವಾರ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನೂತನವಾಗಿ ಆವಿಷ್ಕರಿಸಲಾದ ವಿ ಎಲ್ ಗ್ಲಾಸ್ ಕುರಿತಾಗಿ ಮಾಹಿತಿ ನೀಡುತ್ತಾ, ಸಾಮಾಜಿಕ ಸ್ವಾಸ್ಥ್ಯದ ಜವಾಬ್ದಾರಿಯಾಗಿ ಕನ್ನಡಕವನ್ನು ವಿನ್ಯಾಸಗೊಳಿಸಲಾಗಿದೆ ಎಂದರು.

ವಿ ಎಲ್ ಗ್ಲಾಸ್ ಒಂದು ಸರಳ ರೀತಿಯ ಕನ್ನಡಕವಾಗಿದೆ. ಕನ್ನಡಕಕ್ಕೆ ವಿಶೇಷ ಚೌಕಟ್ಟು ಇರುತ್ತದೆ. ಎರಡು ಗಾಜುಗಳಿರುತ್ತವೆ, ಗಾಜುಗಳ ಜೋಡಣೆಯ ಚೌಕಟ್ಟಿನ ಒಳಗೆ ಪುಟ್ಟ ಸಂವೇದಕವನ್ನು ಅಳವಡಿಸಲಾಗಿದೆ. ಈ ಸಂವೇದಕವು ಎಲ್‌ಐಎಫ್‌ಐ ತಂತ್ರಜ್ಞಾನದ ಮೂಲಕ ಬೆಳಕಿನ ಅತಿ ಕೆಂಪು ಕಿರಣಗಳನ್ನು ಪಡೆಯುತ್ತದೆ. ಈ ಸಂಕೇತಗಳು ಕನ್ನಡಕದ ಎಡ ಮತ್ತು ಬಲದ ಚೌಕಟ್ಟುಗಳಲ್ಲಿ ಅಳವಡಿಸಿದ ಕಂಪನಕಾರಕಗಳ ಮೂಲಕ ಕನ್ನಡವನ್ನು ಧರಿಸಿದ ವ್ಯಕ್ತಿಗೆ ಎಚ್ಚರಿಕೆ ನೀಡುತ್ತವೆ ಎಂದು ಶೆಟ್ಟಿ ವಿವರಿಸಿದರು.

ಇದು ಮಾತ್ರವಲ್ಲದೆ ಕನ್ನಡಕದ ಚೌಕಟ್ಟಿನ ಕೊನೆಯಲ್ಲಿ ಕಿವಿಯೊಳಗೆ ಧರಿಸುವ ಇಯರ್ ಫೋನ್ ಇದೆ. ಅದರ ಮೂಲಕವು ಕನ್ನಡಕ ಧರಿಸಿದ್ದ ವ್ಯಕ್ತಿಗೆ ಸಂದೇಶಗಳನ್ನು ನೀಡುತ್ತವೆ. ಇದು ಅಂಧ ವ್ಯಕ್ತಿಯು ಯಾವುದೇ ಅಡೆತಡೆಗಳನ್ನು ಗ್ರಹಿಸಿ ಇತರರ ಸಹಾಯವಿಲ್ಲದೆ ಎಚ್ಚರಿಕೆಯಿಂದ ನಡೆದಾಡಲು ಸಹಾಯ ಮಾಡುತ್ತದೆ. ವಿ ಎಲ್ ಗ್ಲಾಸ್ ಅಂಧರ ಬಾಳಿಗೆ ಬಹುಮುಖಿ ಚಲನಶೀಲತೆಯ ಆಪ್ತಮಿತ್ರ ಎಂದು ರಾಘವ ಶೆಟ್ಟಿ ಬಣ್ಣಿಸಿದರು.

ಅಂಧ ವ್ಯಕ್ತಿಯು ಈ ಕನ್ನಡಕವನ್ನು ಧರಿಸಿ ಮನೆಯ ಅಥವಾ ಕಚೇರಿಯ ಒಳಗೆ ಪ್ರವೇಶಿಸಿದಾಗ ಅಲ್ಲಿಯ ಎಲ್‌ಇಡಿ ಬಲ್ಬುಗಳ ಕಿರಣಗಳನ್ನು ಕನ್ನಡದ ಚೌಕಟ್ಟಿನಲ್ಲಿ ಅಳವಡಿಸಿದ ಸಂವೇದಕವು ಗ್ರಹಿಸುತ್ತದೆ ಹಾಗೂ ಅಲ್ಲಿನ ಪರಿಸರದ ವಸ್ತುಗಳನ್ನು ಗ್ರಹಿಸಿ ಕಂಪನಕಾರಕ ಸಂದೇಶಗಳನ್ನು ನೀಡುತ್ತದೆ. ಇದರಿಂದಾಗಿ ವ್ಯಕ್ತಿಯು ಯಾವುದೇ ಅಡೆತಡೆಗಳಿಲ್ಲದೆ ಒಳಾಂಗಣದಲ್ಲಿ ಅಡ್ಡಾಡ ಬಹುದು ಇಲ್ಲವೇ ವಿಶ್ರಾಂತಿ ಪಡೆಯ ಬಹುದು ಎಂದು ಶೆಟ್ಟಿ ನುಡಿದರು.

ಅಂಧ ವ್ಯಕ್ತಿಯು ಒಳಾಂಗಣದಲ್ಲಿ ಬೆಳಕಿನ ಕಿರಣಗಳ ಅಡಿಯಲ್ಲಿ ನಡೆಯುತ್ತಿರುವಾಗ ಆತ ನಿಂತಿರುವ ಸ್ಥಾನವನ್ನು ಅತಿ ನಿಖರವಾದ ತ್ರಿಡಿ ಪೊಸಿಶನಿಂಗ್ ಮೂಲಕ ಗೊತ್ತು ಪಡಿಸುತ್ತದೆ. ಜತೆಗೆ ಪರಿಸರದಲ್ಲಿರುವ ವಸ್ತುಗಳ ಸ್ಥಾನ, ದೂರ ಇನ್ನಿತರ ಸೂಚನೆಗಳನ್ನು ಅತೀ ನಿಖರವಾಗಿ ತಿಳಿಸುತ್ತದೆ ಎಂದು ತಿಳಿಸಿದ ರಾಘವ ಶೆಟ್ಟಿ, ಕೈಗೆಟಕುವ ದರದಲ್ಲಿ ಕನ್ನಡಕವನ್ನು ಸಿದ್ಧ ಪಡಿಸಿ ಪೂರೈಕೆ ಮಾಡಬಹುದಾಗಿದೆ ಎಂದರು.

ಆರ್‌ಡಿಎಲ್‌ರವರ ವಿಎಲ್‌ಸಿ ಪ್ರಯೋಗ ಶಾಲೆಯನ್ನು 2018ರ ಮಾ.26ರಂದು ಡಿಆರ್‌ಡಿಒ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಆಡಳಿತ ನಿರ್ದೇಶಕ ಬ್ರಹ್ಮೋಸ್ ಕ್ಷಿಪಣಿ ಖ್ಯಾತಿಯ ಡಾ.ಸುಧೀರ್‌ಕುಮಾರ್ ಉದ್ಘಾಟಿಸಿದ್ದರು.

ಸುದ್ದಿಗೋಷ್ಠಿಯಲ್ಲಿ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಉಪ ಪ್ರಾಂಶುಪಾಲ ಪ್ರೊ.ಎಸ್.ಎಸ್.ಬಾಲಕೃಷ್ಣ, ಸಂಶೋಧನಾ ನಿರ್ದೇಶಕ ಪ್ರೊ.ಮಂಜಪ್ಪ, ಪ್ರಾಧ್ಯಾಪಕರಾದ ಡಾ.ಅಶ್ವತ್ ರಾವ್, ಡಾ.ಅನೂಶ್ ಬೇಕಲ್, ಟ್ರಸ್ಟಿ ದೇವದಾಸ ಹೆಗ್ಡೆ ಮತ್ತು ಡೀನ್ ಪ್ರೊ.ರವಿಚಂದ್ರ ಉಪಸ್ಥಿತರಿದ್ದರು.

THE NEW
INDIAN
EXPRESS
MANGALURU • SATURDAY • AUGUST 4, 2018 • ₹6.00 • PAGES 18 • CITY EDITION

CENTRAL LIBRARY




# Special glass to assist blind in navigating indoors

**EXPRESS NEWS SERVICE**
@ Mangaluru

RDL Visible Light Communication and Research Centre at Sahayadri Innovation Hub at Sahayadri Engineering College here has come out with yet another invention of VL Glass - a spectacles assisting the blind to navigate in visible light. The prototype of the invention was introduced to media persons at college premises on Friday.

Addressing media persons, Raghavendra Shetty, Director and CEO of RDL said that visible light communication enabled VL Glass navigates the person indoors through instructions and vibration without the risk of accidents like bumping into a sofa, doors or any furniture. It actually instructs the person to sit down on the sofa when he walks near it.

In the frame between the glasses, there is bridge, on which a sensor is implanted. This sensor is a VILR - visible light Infrared receiver which receives the signals through visible light communication. On the frames connecting the glasses to the ear lobe there are vibrators on both sides. At the end of the frames, speakers are connected which act as ear phones.



VL Glass - spectacles assisting the blind to navigate in visible light

On the frames connecting earlobes, there is a battery on the left frame and a navigator on the right frame. When the person walks under the LED lights which are strategically fixed on the roof of the room, the sensor scans the indoor environment, and sends the signal through the vibrator and passes instructions through the speakers which are placed at the end of the frame fitting in the ears of the person. As the person walks under the light cones, the visible light communication enables the communications through the sensor.

Seamless indoor navigation without GPS positioning allows the person to move freely. With several special features, this glass can also come at cheaper cost of Rs 500 when produced in bulk, Raghavendra added.

ಶನಿವಾರ 4.8.2018
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ
• ಹುಬ್ಬಳ್ಳಿ • ಮಂಗಳೂರು • ಕಲಬುರಗಿ
ಸಂಪುಟ 52 • ಸಂಚಿಕೆ 215 • ಪುಟ 12+4 • ಬೆಲೆ ₹5
epaper.kannadaprabha.in



ಪಾಕ್ ಭಾವಿ ಪ್ರಧಾನಿ ಇಮ್ರಾನ್ ಖಾನ್‌ಗೆ ಕೋರ್ಟ್ ಸಮನ್ಸ್ 9

ಫೇಸ್‌ಬುಕ್, ವಾಟ
ಮೇಲೆ ನಿಗಾ ಇಲ್ಲ: ಕೆ



# ಕನ್ನಡಪ್ರಭ

ನೇರ.ದಿಟ್ಟ.ನಿರಂತರ





ಇಂದಿನ ಸ್ಪೆಷಲ್! ಈ
ಅಲ್ಲ
ಪುರವಣಿಯಲ್ಲಿಂದು
ಮೈಸೂರು ಮಹಾರಾಜರ
ಹಿನ್ನೆಲೆಯಲ್ಲಿ ಬದಲಾದ ಚಾ
ದರ್ಶನ್ ಅವರ ಹೊಸ ಸಿನಿ
16ರಂದು ಮುಹೂರ್ತ.


## ಸಹ್ಯಾದ್ರಿಯಲ್ಲಿ ಸ್ಟಾರ್ಟ್‌ಅಪ್ ಕಂಪನಿ ಆಯ್ಕೆ

KP



ಆಯ್ಕೆಯಾದ ಸಹ್ಯಾದ್ರಿ ತಂಡ.

**ಮಂಗಳೂರು:** ಅಡ್ಯಾರಿನ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಕರ್ನಾಟಕ ಸರ್ಕಾರ ಕೆ-ಟೆಕ್ ಸಂಘಟಿಸಿದ ಎಲಿವೇಟ್ 100 ಮಂಗಳೂರು ಮತ್ತು ಉಡುಪಿ ಪ್ರದೇಶದ ಸ್ಟಾರ್ಟ್ ಅಪ್ ಕಂಪನಿ ಆಯ್ಕೆ ನಡೆಸಲಾಯಿತು.

ಸಹ್ಯಾದ್ರಿಯಿಂದ 2 ಸ್ಟಾರ್ಟ್ ಅಪ್ ಕಂಪನಿ ತಂಡಗಳು ಸೇರಿದಂತೆ ಒಟ್ಟು 12 ತಂಡಗಳು ಈ ಎರಡೂ ಪ್ರದೇಶಗಳಿಂದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿವೆ. ತೀರ್ಪುಗಾರರ ಸಮಿತಿಯು ಹಿರಿಯ ವ್ಯವಸ್ಥಾಪಕ-ಕರ್ನಾಟಕ ಆರಂಭಿಕ ಸೆಟಕಲ್ ಸತ್ಯನಾರಾಯಣ ಬಿ.ವಿ., ಥಿಂಕ್ಸ್ಲೇಟ್ ಟೆಕ್ನಾಲಜೀಸ್ ನಿರ್ದೇಶಕ ಉದಯ ಬಿರ್ಜೆ, ಆಡಳಿತ ಸದಸ್ಯ ಸೂರ್ಯನಾರಾಯಣನ್ ಎ, ಆಡಳಿತ ಮಂಡಳಿಯ ಸದಸ್ಯ, ಟಿಐ, ಬೆಂಗಳೂರು ಮತ್ತು ಸೆಕ್ಯುರೆಡ್ ಔಟ್ಸೋರ್ಸಿಂಗ್ ಸೊಲ್ಯುಷನ್ಸ್ ನಿರ್ದೇಶಕ ಸುಶೀಲಾ ಮಹೇಶ, ಕರ್ನಾಟಕ ಉಪಾಧ್ಯಕ್ಷ ಅನಿಲ್ ಉಪ್ಪಿನ್ ಸಹ ಎಲಿವೇಟ್ 100 ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸಹ್ಯಾದ್ರಿ ಕಾಲೇಜು ಕಳೆದ ಎರಡು ವರ್ಷಗಳಿಂದ 100 ಕ್ಕೂ ಹೆಚ್ಚು ಸ್ಟಾರ್ಟ್ ಅಪ್ ಸಹಾಯ ಧನ ಮಂಜೂರು ಮಾಡಿದೆ. ಎಂಎಂ ಆಕ್ಟಿವ್ ಈವೆಂಟ್‌ನ್ನು ಸಂಘಟಿಸಿತ್ತು. ಕಿರು ಪಟ್ಟಿಯಲ್ಲಿರುವ ಸ್ಟಾರ್ಟ್ ಅಪ್ ಕಂಪನಿ ತಂಡಗಳು ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಸ್ಪರ್ಧಿಸಲಿವೆ.

ಮತ್ತೆ ವಿತ್ತ ಸಚಿವರಾಗಿ ಇದೇ ತಿಂಗಳು ಜೇಟ್ಲಿ ಅಧಿಕಾರ ಸ್ವೀಕಾರ 9
3 ಲಕ್ಷ ಜೀವವುಳಿಸಿದ ಸ್ವಚ್ಛ ಭಾರತ: ವಿಶ್ವ ಆರೋಗ್ಯ ಸಂಸ್ಥೆ 10
ಲೋಕಹಿತಂ ಮಮ ಕರಣೀಯಂ
ಮಹಿಳಾ ಭದ್ರತೆ ಕೇಂದ್ರ ಬಿಗಿ ಕ್ರಮ 9
ಭಾರತ-ಇಂಗ್ಲೆಂಡ್ ಟೆಸ್ಟ್: ಇಶಾಂತ್‌ಗೆ ಐದು ವಿಕೆಟ್ 3

ಮಂಗಳೂರು
ಶನಿವಾರ
4 ಆಗಸ್ಟ್ 2018
ವಿಲಂಬಿ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ ನಕ್ಷತ್ರ: ಅಶ್ವಿನಿ
ಬೆಲೆ ₹ 5.00

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ HD

ಸಂಪುಟ 40, ಸಂಚಿಕೆ 139, ಪುಟಗಳು 12+4 ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at kodialbail

## ಸಹ್ಯಾದ್ರಿಯಲ್ಲಿ ಎಲಿವೇಟ್ 100 ಆಯ್ಕೆ

ದಿಗಂತ ಚಿತ್ರ




ಸಹ್ಯಾದ್ರಿ ಕಾಲೇಜ್ ಕ್ಯಾಂಪಸ್‌ನಲ್ಲಿ ಕರ್ನಾಟಕ ಸರ್ಕಾರ ಕೆ-ಟೆಕ್ ಸಂಘಟಿಸಿದ ಎಲಿವೇಟ್ 100 ಮಂಗಳೂರು ಮತ್ತು ಉಡುಪಿ ಪ್ರದೇಶದ ಸ್ಟಾರ್ಟ್ ಅಪ್ ಕಂಪನಿ ಆಯ್ಕೆ ನಡೆಸಲಾಯಿತು. ಸಹ್ಯಾದ್ರಿಯಿಂದ 2 ಸ್ಟಾರ್ಟ್ ಅಪ್ ಕಂಪನಿ ತಂಡಗಳು ಸೇರಿದಂತೆ ಒಟ್ಟು 12 ತಂಡಗಳು ಈ ಎರಡೂ ಪ್ರದೇಶಗಳಿಂದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿವೆ. ತೀರ್ಪುಗಾರರ ಸಮಿತಿಯು ಹಿರಿಯ ವ್ಯವಸ್ಥಾಪಕ-ಕರ್ನಾಟಕ ಆರಂಭಿಕ ಸೆಟಿಕಲ್ ಸತ್ಯ ನಾರಾಯಣ ಬಿ. ವಿ., ಉದಯ ಬಿರ್ಜೆ, ಸೂರ್ಯನಾರಾಯಣನ್ ಎ, ಸೆಕ್ಯುರೆಡ್ ಔಟ್ಸೋರ್ಸಿಂಗ್ ಸೊಲ್ಯುಷನ್ಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಸುಶೀಲಾ ಮಹೇಶ್. ಕರ್ನಾಟಕ ಉಪಾಧ್ಯಕ್ಷರಾಗಿರುವ ಕರ್ನಾಟಕ ಕೌನ್ಸಿಲ್ನ ವ್ಯವಸ್ಥಾಪಕ ನಿರ್ದೇಶಕ ಅನಿಲ್ ಉಪ್ಪಿನ್, ಸಹ್ಯಾದ್ರಿ ಕಾಲೇಜಿನ ಮಂಜುನಾಥ ಭಂಡಾರಿ ಸಹ ಎಲಿವೇಟ್ 100 ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಶನಿವಾರ 4.8.2018
ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ
ಸಂಪುಟ 52 • ಸಂಚಿಕೆ 215 • ಪುಟ 12+4 • ಬೆಲೆ ₹5
epaper.kannadaprabha.in

ಪಾಕ್ ಭಾವಿ ಪ್ರಧಾನಿ ಇಮ್ರಾನ್ ಖಾನ್‌ಗೆ ಕೋರ್ಟ್ ಸಮನ್ಸ್ ›9

ಫೇಸ್‌ಬುಕ್, ವಾಟ
ಮೇಲೆ ನಿಗಾ ಇಲ್ಲ: ಕೆ

ಕನ್ನಡಪ್ರಭ
ನೇರ.ದಿಟ್ಟ.ನಿರಂತರ



ಸ್ಪೆಷಲ್!
ಪುರವಣಿಯಲ್ಲಿಂದು
ಮೈಸೂರು ಮಹಾರಾಜರ
ಹಿನ್ನೆಲೆಯಲ್ಲಿ ಬದಲಾದ ಚಾ
ದರ್ಶನ್ ಅವರ ಹೊಸ ಸಿನಿ
16ರಂದು ಮುಹೂರ್ತ.

**ಹೊಸ ಉಪಕರಣ** | ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಯೋಗಿಕ ಪ್ರದರ್ಶನ

# ಅಂಧರ ಬಾಳಿಗೊಂದು ಆಶಾಕಿರಣ ವಿಎಲ್ ಗ್ಲಾಸ್ ಎಂಬ ವಿಶಿಷ್ಟ ಕನ್ನಡಕ

• **ಕನ್ನಡಪ್ರಭ ವಾರ್ತೆ** ಮಂಗಳೂರು

ವಿಎಲ್ ಗ್ಲಾಸ್ ಎಂಬ ವಿಶಿಷ್ಟ ಕನ್ನಡಕದ ಮೂಲಕ ಬಹುಮುಖ ಚಲನಶೀಲತೆಗೆ ನೆರವು ನೀಡುವ ಪರಿಣಾಮಕಾರಿ ಸಂವಹನ ದೃಷ್ಟಿ ಮಾಧ್ಯಮವನ್ನು ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶುಕ್ರವಾರ ಪ್ರಾಯೋಗಿಕವಾಗಿ ಪ್ರದರ್ಶಿಸಲಾಗಿದೆ. ಸ್ಟಾರ್ಟ್‌ಅಪ್ ಇಂಡಿಯಾ ಅಡಿಯಲ್ಲಿ ಈ ಕನ್ನಡಕವನ್ನು ಅಭಿವೃದ್ಧಿಪಡಿಸಲಾಗಿದೆ.

ಸಹ್ಯಾದ್ರಿ ಇನ್ನೋವೇಶನ್ ಹಬ್‌ನಿಂದ ಪ್ರಾಯೋಜಿತ ತಂತ್ರಜ್ಞಾನ ಸಂಸ್ಥೆ ಆರ್ ಡಿ ಎಲ್ ಟೆಕ್ನಾಲಜೀಸ್ ಇದನ್ನು ಅಭಿವೃದ್ಧಿಪಡಿಸಿದೆ. ವಿಎಲ್‌ಸಿ ಲ್ಯಾಬ್ ಬೆಳಕಿನ ಆವರ್ತಗಳನ್ನಷ್ಟೇ ಅವಲಂಬಿಸಿ ಅಪಾಯಕಾರಿ ಆರ್.ಎಫ್. ತರಂಗಗಳ ಕಿರಣಗಳನ್ನು ನಿವಾರಿಸಿ ಸಂಶೋಧಿಸಿದ ತಂತ್ರಜ್ಞಾನವೇ ಎಲ್‌ಐಎಫ್‌ಐ. ಈ ತಂತ್ರಜ್ಞಾನದಿಂದ ಆಷ್ಕರಿಸಲ್ಪಟ್ಟ ವಿಎಲ್ ಗ್ಲಾಸ್ ದೃಷ್ಟಿಹೀನ ವ್ಯಕ್ತಿಗಳಿಗೆ ನೆರವಾಗಲಿದೆ.

ಒಬ್ಬ ಅಂಧ ಅಥವಾ ದೃಷ್ಟಿಮಾಂದ್ಯ ವ್ಯಕ್ತಿ ಈ ಕನ್ನಡಕವನ್ನು ಧರಿಸಿ ಮನೆಯ ಅಥವಾ ಕಚೇರಿಯ ಒಳಾಂಗಣವನ್ನು ಪ್ರವೇಶಿಸಿದಾಗ ಅಲ್ಲಿಯ ಎಲ್‌ಇಡಿ ಬಲ್ಬುಗಳ ಕಿರಣಗಳನ್ನು



ವಿಶಿಷ್ಟ ಕನ್ನಡಕವನ್ನು ಪ್ರದರ್ಶಿಸುತ್ತಿರುವುದು.

ಕನ್ನಡಕದ ಚೌಕಟ್ಟಿನಲ್ಲಿ ಅಳವಡಿಸಿದ ಸಂವೇದಕವು ಗ್ರಹಿಸುತ್ತದೆ. ಅಲ್ಲಿಯ ಪರಿಸಗದಲ್ಲಿರುವ ವಸ್ತುಗಳನ್ನು, ಅಡೆತಡೆಗಳನ್ನು ಗ್ರಹಿಸಿ ಕಂಪನಕಾರಕದ ಮೂಲಕ ಸಂದೇಶಗಳನ್ನು ನೀಡುತ್ತದೆ. ಇದರಿಂದಾಗಿ ಈ ವ್ಯಕ್ತಿಯು ಯಾವುದೇ ಅಡೆತಡೆಗಳಿಲ್ಲದೆ ಒಳಾಂಗಣದಲ್ಲಿ ಅಡ್ಡಾಡಬಹುದು ಅಥವಾ ವಿಶ್ರಾಂತಿ ಪಡೆಯಬಹುದು.

ಅಂಧ ವ್ಯಕ್ತಿಯು ಒಳಾಂಗಣದಲ್ಲಿ ಬೆಳಕಿನ ಕಿರಣಗಳ ಅಡಿಯಲ್ಲಿ ನಡೆಯುತ್ತಿರುವಾಗ ಆತ ನಿಂತಿರುವ ಸ್ಥಾನವನ್ನು ಅತಿ ನಿಖರವಾಗಿ ತ್ರಿಡಿ ಪೊಸಿಶನಿಂಗ್ ಮೂಲಕ ಗೊತ್ತುಪಡಿಸುತ್ತದೆ. ಅಲ್ಲದೆ ಆ ಪರಿಸರದಲ್ಲಿರುವ ವಸ್ತುಗಳ ಸ್ಥಾನ, ದೂರ ಇನ್ನಿತರ ಸೂಚನೆಗಳನ್ನು ಅತಿ ನಿಖರವಾಗಿ ತಿಳಿಸುತ್ತದೆ.

ಇದಲ್ಲದೆ ವಿಎಲ್ ಗ್ಲಾಸ್ ಇನ್ನೊಂದು ಅದ್ಭುತ ತಂತ್ರಜ್ಞಾನವನ್ನು ಒಳಗೊಂಡಿದೆ. ಅದುವೇ ರಿಯಲ್ ಟೈಮ್ ಆಕ್ಟಿವಿಟಿ ಮೊನಿಟರಿಂಗ್ ಮತ್ತು ಅಲರ್ಟ್ ಸಿಸ್ಟಮ್. ಇದು ಈ ಕನ್ನಡಕವನ್ನು ಧರಿಸಿದ ವ್ಯಕ್ತಿಯು ಯಾವುದೇ ತೊಂದರೆಗೊಳಗಾದರೆ ತಕ್ಷಣವೇ ಈವ್ಯಕ್ತಿಯಸಂಬಂಧಿಕರನ್ನುಸಂಪರ್ಕಿಸುತ್ತದೆ. ಅಲ್ಲದೆ ಕೂಡಲೇ ಸಹಾಯ ದೊರಕುವಂತೆ ಮಾಡುತ್ತದೆ.

ಆರ್‌ಡಿಎಲ್ ಅವರ ವಿಎಲ್‌ಸಿ ಪ್ರಯೋಗಶಾಲೆಯನ್ನು ಭಾರತದ ಹೆಸರಾಂತ ವಿಜ್ಞಾನಿ, ಬ್ರಹ್ಮೋಸ್ ಕ್ಷಿಪಣಿ ಸಂಶೋಧನಾ ಕೇಂದ್ರ ಡಿಆರ್‌ಡಿಒ ಇದರ ಸಿಇಒ ಹಾಗೂ ಎಂ ಡಿ ಡಾ. ಸುಧೀರ್ ಕುಮಾರ್ ಮಿಶ್ರ ಅವರು ಮಾರ್ಚ್‌ನಲ್ಲಿ ಉದ್ಘಾಟಿಸಿದ್ದರು.

ಇವರಿಂದ ಪ್ರೇರಣೆಗೊಂಡ ಯುವ ವಿಜ್ಞಾನಿಗಳ ತಂಡ ರಾಘವ ಶೆಟ್ಟಿ ಅವರ ನೇತೃತ್ವದಲ್ಲಿ ಕೇವಲ 3 ತಿಂಗಳ ಅವಧಿಯಲ್ಲಿ ಈ ತಂತ್ರಜ್ಞಾನವನ್ನು ಆವಿಷ್ಕರಿಸಿದೆ. ವಿಜ್ಞಾನಿಗಳ ತಂಡದಲ್ಲಿ ಕನ್ವಲ್ ಕರ್ಕೇರ - ತಾಂತ್ರಿಕ ನಿರ್ದೇಶಕರು, ಡಾ. ಅಶ್ವತ್ ರಾವ್ ಹಾಗೂ ಡಾ. ಅನೂಶ್ ಬೇಕಲ್ - ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಬೋಧಕ ಪ್ರಾಧ್ಯಾಪಕರು ಹಾಗೂ ಸಂವೇದಕ ತಯಾರಿಕೆಯ ಮಾರ್ಗದರ್ಶಕರು, ವಿಶ್ವನಾಥ್ ಆಚಾರ್ಯ ಕ್ಯಾಡ್ ಡಿಸೈನ್ ಸಹಾಯಕ, ಗಣೇಶ್ ಐತಾಳ್ - ನಿರ್ದೇಶಕರು, ಕ್ಯಾಡ್ ಡಿಸೈನ್ ಹಾಗೂ ಪಿಸಿಬಿ,ಪ್ರದೀಪ್ ಮೆಷಿನ್ ಲರ್ನಿಂಗ್ ಇದ್ದರು ಎಂದು ಪ್ರಕಟಣೆ ತಿಳಿಸಿದೆ.

## ಏನಿದು ವಿಶಿಷ್ಟ ಕನ್ನಡಕ?

ವಿಎಲ್ ಗ್ಲಾಸ್ ಅತ್ಯಾಧುನಿಕ ತಂತ್ರಜ್ಞಾನವನ್ನೊಳಗೊಂಡ ಒಂದು ಸರಳ ಕನ್ನಡಕ. ಒಂದು ವಿಶೇಷವಾಗಿ ತಯಾರಿಸಲ್ಪಟ್ಟ ಕನ್ನಡಕದ ಚೌಕಟ್ಟು. ಅದರಲ್ಲಿ ಎರಡು ಗಾಜುಗಳು. ಗಾಜುಗಳ ಜೋಡಣೆಯ ಚೌಕಟ್ಟಿನ ಒಳಗಿರಿಸಿದ ಪುಟ್ಟ ಸಂವೇದಕ. ಈ ಸಂವೇದಕವನ್ನು ಐಎಲ್‌ಆರ್ ಎಂದು ಕರೆಯುತ್ತಾರೆ. ಈ ಸಂವೇದಕವು ಎಲ್ ಐಎಫ್‌ಐ ತಂತ್ರಜ್ಞಾನದ ಮೂಲಕ ಬೆಳಕಿನ ಅತಿ ಕೆಂಪು ಕಿರಣಗಳನ್ನು ಪಡೆಯುತ್ತದೆ. ಈ ಸಂಕೇತಗಳು ಕನ್ನಡಕದ ಎಡ ಬಲದ ಚೌಕಟ್ಟುಗಳಲ್ಲಿ ಅಳವಡಿಸಿದ ಕಂಪನಕಾರಕಗಳ ಮೂಲಕ ಕನ್ನಡಕ ಧರಿಸಿದ ವ್ಯಕ್ತಿಗೆ ಎಚ್ಚರಿಕೆಯನ್ನು ನೀಡುತ್ತದೆ. ಅಲ್ಲದೆ ಕನ್ನಡಕದ ಚೌಕಟ್ಟಿನ ಕೊನೆಯಲ್ಲಿ ಕಿವಿಯೊಳಗೆ ಧರಿಸುವಂತಹ ಇಯರ್ ಫೋನ್‌ಗಳ ಮೂಲಕ ಸಂದೇಶಗಳನ್ನು ನೀಡುತ್ತದೆ.

ಶನಿವಾರ, ಆಗಸ್ಟ್ 4, 2018 | ₹ 5.00
• www.prajavani.net
f/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಮತ್ತೆ ವಿಶ್ವರೂಪ
ಕೊಚ್ಚಿಯಲ್ಲಿ ಶುಕ್ರವಾರ ನಡೆದ 'ವಿಶ್ವರೂಪಂ–2' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಟ ಕಮಲ್ ಹಾಸನ್ ಮತ್ತು ನಟಿ ಪೂಜಾ ಕುಮಾರ್



'ಸಹ್ಯಾದ್ರಿ ಇನ್ನೊವೇಶನ್ ಹಬ್' –ವಿಶಿಷ್ಟ ತಂತ್ರಜ್ಞಾನ

# ಅಂಧರಿಗಾಗಿ 'ವಿ.ಎಲ್.ಗ್ಲಾಸ್' ಕನ್ನಡಕ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಸ್ಟಾರ್ಟ್ ಅಪ್ ಇಂಡಿಯಾದಿಂದ ಗುರುತಿಸಿಕೊಂಡಿರುವ ಅಡ್ಯಾರ್‌ನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ 'ಸಹ್ಯಾದ್ರಿ ಇನ್ನೊವೇಷನ್ ಹಬ್' ಆಶ್ರಯದಲ್ಲಿ ಆರ್ ಡಿ ಎಲ್ ಟೆಕ್ನಾಲಜೀಸ್ ಸಂಸ್ಥೆಯು ದೃಷ್ಟಿಹೀನರಿಗಾಗಿ 'ವಿ.ಎಲ್. ಗ್ಲಾಸ್' ಕನ್ನಡಕ ಸಂಶೋಧನೆ ಮಾಡಿದೆ.

ಅದರ ಪೂರ್ವಭಾವಿಯಾಗಿ ಶುಕ್ರವಾರ ಕಾಲೇಜಿನಲ್ಲಿ ವಿ.ಎಲ್. ಗ್ಲಾಸ್, ಅಂಧರ ಬಾಳಿಗೊಂದು ಆಶಾಕಿರಣ ಕುರಿತು ಪ್ರಾತ್ಯಕ್ಷಿಕೆ ನಡೆಯಿತು.

ವಿಶ್ವದಾದ್ಯಂತ ಅಂಧತ್ವವು ಸವಾಲಾಗಿ ಪರಿಣಮಿಸಿದೆ. ಅದನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಅಂಧರಿಗಾಗಿ ವಿಶ್ವದಲ್ಲಿಯೇ ಪ್ರಥಮ ಬಾರಿಗೆ 'ವಿ.ಎಲ್. ಗ್ಲಾಸ್' ಕನ್ನಡಕ ಸಂಶೋಧನೆ ರೂಪದಲ್ಲಿ ಹೊರಹೊಮ್ಮಿದೆ.

ವಿ.ಎಲ್. ಗ್ಲಾಸ್ ವಿಶಿಷ್ಟ ಕನ್ನಡಕದ ಮೂಲಕ ಬಹುಮುಖ ಚಲನಶೀಲತೆ ನೆರವು ಪಡೆಯಬಹುದಾಗಿದೆ. ಅಂಧ, ದೃಷ್ಟಿಹೀನರಿಗೆ ಪರಿಣಾಮಕಾರಿ ಸಂವಹನ ದೃಷ್ಟಿ ಮಾಧ್ಯಮ ಇದಾಗಿದೆ. ಅಂಧರ ಬಾಳಿನಲ್ಲಿ ಬೆಳಕು ಮೂಡಿಸುವ ಮಹತ್ತರವಾದ ಕೆಲಸಕ್ಕೆ ಪ್ರತಿಫಲ ಸಿಕ್ಕಂತಾಗಿದೆ. ಬೆಳಕಿನ ಆವರ್ತಗಳನ್ನಷ್ಟೇ ಅವಲಂಬಿಸಿ, ಅಪಾಯಕಾರಿ ಆರ್ ಎಫ್ ತರಂಗಗಳ ವಿಕಿರಣ ನಿವಾರಿಸಿ ಸಂಶೋಧನೆ ಮಾಡಿರುವ ತಂತ್ರಜ್ಞಾನವೇ ಎಲ್‌ಐಎಫ್‌ಐ. ಈ ತಂತ್ರಜ್ಞಾನದಿಂದ ಆವಿಷ್ಕರಿಸಲಾಗಿರುವ ಅದ್ಭುತ ಕೊಡುಗೆ 'ವಿ.ಎಲ್.ಗ್ಲಾಸ್'. ದೃಷ್ಟಿಹೀನರಿಗಾಗಿಯೇ ಈ ಅಪೂರ್ವ ತಂತ್ರಜ್ಞಾನ ಇದೆ ಎಂದು ಆರ್‌ಡಿಎಲ್ ಕಂಪನಿಯ ಸ್ಥಾಪಕ ನಿರ್ದೇಶಕ ಹಾಗೂ ಸಿಇಒ ರಾಘವೇಂದ್ರ ಜಿ.ಶೆಟ್ಟಿ ಮಾಹಿತಿ ನೀಡಿದರು.

ಸಂಶೋಧನೆ ಹಾಗೂ ತಂತ್ರಜ್ಞಾನದ ಎಲ್ಲ ಹಂತದ ಕೆಲಸಗಳು ಮುಗಿದಿದ್ದು, ಪ್ರಾಯೋಗಿಕ ಪ್ರಾತ್ಯಕ್ಷತೆ ನೀಡಲಾಗುತ್ತಿದೆ. ವಿ.ಎಲ್.ಗ್ಲಾಸ್‌ನ ಬೆಲೆ ₹ 500 ರಿಂದ ₹ 600 ಆಗಬಹುದು. ಉತ್ಪಾದಕರು ಮುಂದೆ ಬಂದರೆ 6 ತಿಂಗಳ ಒಳಗಾಗಿ ಈ ಕನ್ನಡಕವು ಮಾರುಕಟ್ಟೆಯಲ್ಲಿ ಲಭ್ಯವಾಗಲಿದೆ ಎಂದು ರಾಘವೇಂದ್ರ ಶೆಟ್ಟಿ ಹೇಳಿದರು.

ಸಹ್ಯಾದ್ರಿ ಕಾಲೇಜಿನ ಉಪಪ್ರಾಚಾರ್ಯ ಎಸ್.ಎಸ್. ಬಾಲಕೃಷ್ಣ, ಸಂಶೋಧನಾ ನಿರ್ದೇಶಕ ಡಾ. ಮಂಜಪ್ಪ, ಟ್ರಸ್ಟಿ ದೇವದಾಸ್ ಹೆಗ್ಡೆ , ತಾಂತ್ರಿಕ ನಿರ್ದೇಶಕ ಕನ್ವಲ್ ಕರ್ಕೇರ, ಡಾ ಅಶ್ವತ್ ರಾವ್ ಹಾಗೂ ಡಾ ಅನೂಶ್ ಬೇಕಲ್, ವಿಶ್ವನಾಥ್ ಆಚಾರ್ಯ, ಗಣೇಶ್ ಐತಾಳ್, ಪ್ರದೀಪ್ ಇದ್ದರು.

## ಆತ್ಮವಿಶ್ವಾಸದ ಕೊಂಡಿ

ಅಂಧ ವ್ಯಕ್ತಿಯು ಒಳಾಂಗಣದಲ್ಲಿ ಬೆಳಕಿನ ಕಿರಣಗಳ ಅಡಿಯಲ್ಲಿ ನಡೆಯುವಾಗ ಆತ ನಿಂತಿರುವ ಸ್ಥಾನವನ್ನು ಅತಿ ನಿಖರವಾಗಿ ತ್ರಿಡಿ ಪೊಸಿಶನಿಂಗ್ ಮೂಲಕ ಗೊತ್ತುಪಡಿಸುತ್ತದೆ. ಅಲ್ಲದೆ ಆ ಪರಿಸರದಲ್ಲಿನ ವಸ್ತುಗಳ ಸ್ಥಾನ, ದೂರ ಇನ್ನಿತರ ಸೂಚನೆ ನಿಖರವಾಗಿ ತಿಳಿಸುತ್ತದೆ. ಅಂಧರ ಆತ್ಮವಿಶ್ವಾಸ ಹಾಗೂ ಸ್ವತಂತ್ರ ಜೀವನಕ್ಕೆ ವಿ.ಎಲ್. ಗ್ಲಾಸ್ ಒಂದು ಅಪೂರ್ವ ಕೊಡುಗೆ ಎಂದು ರಾಘವೇಂದ್ರ ಶೆಟ್ಟಿ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.



ಆರ್ ಡಿ ಎಲ್ ಟೆಕ್ನಾಲಜೀಸ್ ಸಂಸ್ಥೆಯ ಸಿಇಒ ರಾಘವೇಂದ್ರ ಜಿ.ಶೆಟ್ಟಿ 'ವಿ.ಎಲ್. ಗ್ಲಾಸ್' ಕನ್ನಡಕ ಕುರಿತು ಮಾಹಿತಿ ನೀಡಿದರು. ಪ್ರಜಾವಾಣಿ ಚಿತ್ರ



'ವಿ.ಎಲ್. ಗ್ಲಾಸ್' ಕನ್ನಡ.

## ಮುಖ್ಯಾಂಶಗಳು

- ಅಂಧರ ಬಾಳಲ್ಲಿ ಬೆಳಕು ತರುವ ಸಂಶೋಧನೆ ಇದಾಗಿದೆ
- ಬೆಲೆ ಕೂಡಾ ಕಡಿಮೆ ಇದ್ದು, ಇನ್ನು 6 ತಿಂಗಳ ಬೇಕು ಮಾರುಕಟ್ಟೆಗೆ ಬರಲು
- ವಿಶಿಷ್ಟ ಶೈಲಿ ತಂತ್ರಜ್ಞಾನ



ಸಂಪುಟ Volume 60 | ಸಂಚಿಕೆ Issue 190 | ಪುಟ Pages 12+8
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bangaluru | ಕಲಬುರಗಿ Kalaburagi | ದಾವಣಗೆರೆ Davanagere

ಸಂಯುಕ್ತ ಕರ್ನಾಟಕ
samyukthakarnataka
ಕನ್ನಡಿಗರ ಸಾಕ್ಷಿಪ್ರಜ್ಞೆ
ಎಂಟು ದಶಕದ ನಂಟು

ಶನಿವಾರ Satuarday | ಆಗಸ್ಟ್ 04-2018 August | ₹ 5-00

ಚೀನಾದಲ್ಲಿ ನಡೆಯುತ್ತಿರುವ ವಿಶ್ವಕಪ್ ಬ್ಯಾಡ್ಮಿಂಟನ್ ಸ್ಪರ್ಧೆಯ ಕ್ವಾರ್ಟರ್ ಫೈನಲ್‌ನಲ್ಲಿ ಸ್ಪೇನ್‌ನ ಕರೋಲಿನಾ ಮರಿನ್ ಎದುರು ಸೋತ ಸೈನಾ ನೆಹ್ವಾಲ್ ಹತಾಶರಾದಾಗ..

'ಚೀಟ್‌ಇಂಡಿಯಾ' ಚಿತ್ರದಲ್ಲಿ ಇಮ್ರಾನ್‌ಹಶ್ಮಿ ಜತೆ ನಾಯಕಿಯಾಗಿ ನಟಿಸುತ್ತಿರುವ ಶ್ರದ್ಧಾ ಧನವಂತ್ರಿ ಫೋಟೋಶೂಟ್ ವೇಳೆ ಕಾಣಿಸಿಕೊಂಡಿದ್ದು...

# ಅಂಧರ ಬಾಳಿಗೊಂದು ಬೆಳಕಿನ ಆಶಾಕಿರಣ



**ಸಂ.ಕ ಸಮಾಚಾರ, ಮಂಗಳೂರು**

ವಿ.ಎಲ್ ಗ್ಲಾಸ್ (VL Glass) ವಿಶಿಷ್ಟ ಕನ್ನಡಕದ ಮೂಲಕ ಬಹುಮುಖ ಚಲನಶೀಲತೆಯ ನೆರವು. ಅಂಧ, ದೃಷ್ಟಿಹೀನರಿಗೊಂದು ಪರಿಣಾಮಕಾರಿ ಸಂವಹನ ದೃಷ್ಟಿ ಮಾಧ್ಯಮ.

ಅಂಧರ ಬಾಳಿಗೊಂದು ಆತ್ಮವಿಶ್ವಾಸ. ಚಲನಶೀಲತೆಯ ಸ್ವಾತಂತ್ರ್ಯದ ಸಮ್ಮಾನವಿತ್ತವರು, ಸಹ್ಯಾದ್ರಿ ಇನ್ನೊವೇಶನ್ ಹಬ್‌ನಿಂದ ಪ್ರಾಯೋಜಿತ ತಂತ್ರಜ್ಞಾನ ಸಂಸ್ಥೆ ಆರ್ ಡಿ ಎಲ್ ಟೆಕ್ನಾಲಜೀಸ್ ರವರ ವಿ ಎಲ್ ಸಿ ಲ್ಯಾಬ್. ಬೆಳಕಿನ ಆವರ್ತಗಳನ್ನಷ್ಟೇ ಅವಲಂಬಿಸಿ ಅಪಾಯಕಾರಿ ಆರ್ ಎಫ್ ತರಂಗಗಳ ವಿಕಿರಣಗಳನ್ನು ನಿವಾರಿಸಿ ಸಂಶೋಧಿಸಿದ ತಂತ್ರಜ್ಞಾನವೇ ಎಲ್ ಐ ಎಫ್ ಐ. ಈ ತಂತ್ರಜ್ಞಾನದಿಂದ ಆವಿಷ್ಕರಿಸಲ್ಪಟ್ಟ ಒಂದು ಅದ್ಭುತ ಕೊಡುಗೆ ವಿ ಎಲ್ ಗ್ಲಾಸ್ ದೃಷ್ಟಿಹೀನ ವ್ಯಕ್ತಿಗಳಿಗಾಗಿಯೇ ಈ ಅಪೂರ್ವ ತಂತ್ರಜ್ಞಾನ.

ಬೆಳಕಿನಿಂದಲೇ ಶಕ್ತಿ, ಬೆಳಕಿನಿಂದಲೇ ಜೀವನೋತ್ಕರ್ಷ. ಆದರೆ ಆರ್ ಡಿ ಎಲ್‌ರವರಿಗೆ ಬೆಳಕೇ ಮೂಲ ಸಂವಹನ ಮಾಧ್ಯಮ. ಬೆಳಕಿನ ಕಿರಣಗಳ ಚೈತನ್ಯಾಭಿವೃದ್ಧಿಯಿಂದಲೇ ಸಂಶೋಧಿಸಿದ ತಂತ್ರಜ್ಞಾನ ಎಲ್ ಐ ಎಫ್ ಐ. ಈ ತಂತ್ರಜ್ಞಾನವನ್ನು ಅಳವಡಿಸಿ ಸಾಮಾಜಿಕ ಹಿತಕ್ಕೋಸ್ಕರ ತನ್ನನ್ನೇ ಮುಡಿಪಾಗಿಟ್ಟ ಸಂಸ್ಥೆ ಆರ್ ಡಿ ಎಲ್ ಟೆಕ್ನಾಲಜೀಸ್. ಸಾಮಾಜಿಕ ಸ್ವಾಸ್ಥ್ಯ ಚಿಂತನೆಯಲ್ಲೇ ವೈಜ್ಞಾನಿಕ ಸಂಶೋಧನೆಯನ್ನು ಒರೆಗೆ ಹಚ್ಚಿ ಅಂಧರಿಗೋಸ್ಕರವೇ ಸಿದ್ಧಪಡಿಸಿದ ಅಪೂರ್ವ ಆವಿಷ್ಕಾರ ವಿ ಎಲ್ ಗ್ಲಾಸ್.

ಅಂಧತ್ವ ಅಥವಾ ದೃಷ್ಟಿಹೀನತೆ ಇಂದು ವಿಶ್ವದಾದ್ಯಂತ ಸವಾಲಾಗಿ ಪರಿಣಮಿಸಿದೆ. ವಿಶ್ವ ಆರೋಗ್ಯ ಸಂಸ್ಥೆಯ (ಢಬ್ಲ್ಯೂಹೆಚ್ಒ) ಸಮೀಕ್ಷೆಯ ಪ್ರಕಾರ ವಿಶ್ವಾದ್ಯಂತ ಇಂದು ಸುಮಾರು 285 ಮಿಲಿಯನ್ ಅಂಧ ಅಥವಾ ದೃಷ್ಟಿಹೀನರಿದ್ದಾರೆ. ಇಂಥವರಿಗಾಗಿಯೇ ವಿಶ್ವದಲ್ಲಿಯೇ ಪ್ರಥಮ ಬಾರಿ ಸಂಶೋಧಿಸಿ, ಆವಿಷ್ಕರಿಸಿ ಸಿದ್ಧಪಡಿಸಿದ ಅದ್ಭುತ ಕೊಡುಗೆ ವಿ ಎಲ್ ಗ್ಲಾಸ್ (Visible Light Glass).

ಆರ್‌ಡಿಎಲ್‌ರವರ ವಿಎಲ್‌ಸಿ ಪ್ರಯೋಗಶಾಲೆಯನ್ನು ಭಾರತದ ಹೆಸರಾಂತ ವಿಜ್ಞಾನಿ, ಬ್ರಹ್ಮೋಸ್ ಕ್ಷಿಪಣಿ ಸಂಶೋಧನಾ ಕೇಂದ್ರ ಡಿ ಆರ್ ಡಿ ಒ ಇದರ ಸಿಇಒ ಹಾಗೂ ಎಂ ಡಿ ಡಾ. ಸುಧೀರ್ ಕುಮಾರ್ ಮಿಶ್ರರವರು ಮಾ. 26 2018 ರಂದು ಉದ್ಘಾಟಿಸಿದರು.

ಇವರಿಂದ ಪ್ರೇರಣೆಗೊಂಡ ಯುವ ವಿಜ್ಞಾನಿಗಳ ತಂಡ ಶ್ರೀ ರಾಘವ ಶೆಟ್ಟಿಯವರ ನೇತೃತ್ವದಲ್ಲಿ ಹಗಲೂ ರಾತ್ರಿ ಶ್ರಮಿಸಿ ಕೇವಲ 3 ತಿಂಗಳ ಅವಧಿಯಲ್ಲಿ ಆವಿಷಕರಿಸಿದ ತಂತ್ರಜ್ಞಾನವೇ ವಿ ಎಲ್ ಗ್ಲಾಸ್. ಇದಕ್ಕಾಗಿ ಶ್ರಮಿಸಿದ ವಿಜ್ಞಾನಿಗಳ ತಂಡದ ಸದಸ್ಯರು ರಾಘವ ಶೆಟ್ಟಿ, ಕನ್ವಲ್ ಕರ್ಕೇರ, ಡಾ. ಅಶ್ವತ್ ರಾವ್, ವಿಶ್ವನಾಥ್ ಆಚಾರ್ಯ, ಗಣೇಶ್ ಐತಾಳ್, ಪ್ರದೀಪ್. ಸ್ಟಾರ್ಟ್ ಅಪ್ ಇಂಡಿಯಾದಿಂದ ಗುರುತಿಸಲ್ಪಟ್ಟ ಸಹ್ಯಾದ್ರಿ ಎಂಜೀನಿಯರಿಂಗ್ ಕಾಲೇಜಿನಿಂದ ಪ್ರವರ್ತಿಸಲ್ಪಟ್ಟ ಸಹ್ಯಾದ್ರಿ ಇನ್ನೊವೇಷನ್ ಹಬ್‌ನ ಆಶ್ರಯದಲ್ಲಿ ಆರ್ ಡಿ ಎಲ್ ಟೆಕ್ನಾಲಜೀಸ್ ರವರ ವಿಆರ್‌ಎಲ್ ಪ್ರಯೋಗ ಶಾಲೆಯಲ್ಲಿ ಆವಿಷ್ಕರಿಸಲ್ಪಟ್ಟ ವಿಎಲ್ ಗ್ಲಾಸ್, ಅಂಧರ ಬಾಳಿಗೊಂದು ಆಶಾಕಿರಣ.

SINCE 1947
S. L. SHET DIAMOND HOUSE
916 Jewellery | Diamond Jewellery | Precious Stones | Navaratna Stones | Silver Articles
OPP. MANGALA SWIMMING POOL NR. LADYHILL CIRCLE
Kulur Ferry Road, Mangaluru - 575 006. Ph: (0824) 2453262, 2456262

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

CENTRAL LIBRARY

uPVC Windows
Royal
Doors & Windows
Call Us: 8884-2222-70

Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಶನಿವಾರ, ಆಗಸ್ಟ್ 4, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 14+4

## ಸಹ್ಯಾದ್ರಿಯಲ್ಲಿ ವಿ.ಎಲ್. ಗ್ಲಾಸ್ ಪ್ರಾತ್ಯಕ್ಷಿಕೆ

# ಅಂಧರಿಗೆ ನೆರವಾಗುತ್ತದೆ ಈ ಹೊಸ ಕನ್ನಡಕ

ಮಂಗಳೂರು, ಆ. 3: ಅಂಧ ವ್ಯಕ್ತಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಸಹ್ಯಾದ್ರಿ ಇನ್ನೋವೇಶನ್ ಹಬ್ ಪ್ರಾಯೋಜಿತ ಆರ್‌ಡಿಎಲ್ ಟೆಕ್ನಾಲಜೀಸ್ . ತಂತ್ರಜ್ಞಾನ ಸಂಸ್ಥೆಯ ಆಶ್ರಯದಲ್ಲಿ ಸಿದ್ಧಗೊಂಡಿರುವ ವಿ.ಎಲ್. ಗ್ಲಾಸ್‌ನ ಕಾರ್ಯ ನಿರ್ವಹಣೆ ಬಗ್ಗೆ ಸಹ್ಯಾದ್ರಿ ಕಾಲೇಜು ಆವರಣದಲ್ಲಿ ಶುಕ್ರವಾರ ಪ್ರಾತ್ಯಕ್ಷಿಕೆ ನಡೆಸಲಾಯಿತು.



ಹೊಸ ಮಾದರಿಯ ವಿ.ಎಲ್. ಗ್ಲಾಸ್‌ನೊಂದಿಗೆ ತಂಡ.

ಗ್ಲಾಸ್ ಕುರಿತು ಮಾಹಿತಿ ನೀಡಿದ ಆರ್‌ಡಿಎಲ್ ಟೆಕ್ನಾಲಜಿಯ ಮುಖ್ಯಸ್ಥ ರಾಘವ ಶೆಟ್ಟಿ, ಇದು ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ ಸರಳ ಕನ್ನಡಕ. ಎರಡು ಗಾಜು, ಅವುಗಳನ್ನು ಜೋಡಿಸಿದ ಚೌಕಟ್ಟಿನ ಒಳಗಿರಿಸಿದ ಪುಟ್ಟ ಸಂವೇದಕವನ್ನು ಇದು ಹೊಂದಿದೆ. ಈ ಸಂವೇದಕವನ್ನು ವಿಐಎಲ್‌ಆರ್ (ವಿಸಿಬಲ್ ಲೈಟ್ ಇನ್ ಫ್ರಾರೆಡ್ ರಿಸೀವರ್) ಎನ್ನಲಾಗುತ್ತದೆ. ಇದು ಎಲ್‌ಐಎಫ್‌ಐ ತಂತ್ರಜ್ಞಾನದ ಮೂಲಕ ಬೆಳಕಿನ ಅವಗೆಂಪು ಕಿರಣಗಳನ್ನು ಗ್ರಹಿಸಿ, ಕನ್ನಡಕದ ಎಡ-ಬಲದ ಚೌಕಟ್ಟುಗಳಲ್ಲಿ ಅಳವಡಿಸಿದ ಕಂಪನಕಾರಕಗಳ ಮೂಲಕ ಧರಿಸಿದ ವ್ಯಕ್ತಿಗೆ ಎಚ್ಚರಿಕೆ ನೀಡುತ್ತದೆ. ಅಲ್ಲದೆ ಚೌಕಟ್ಟಿನ ಕೊನೆಯಲ್ಲಿ ಅಳವಡಿಸಿರುವ ಇಯರ್ ಫೋನ್ ಮೂಲಕ ಸಂದೇಶಗಳನ್ನು ನೀಡುತ್ತದೆ. ಅಂಧರು ಅಡೆತಡೆಗಳನ್ನು ಗ್ರಹಿಸಿ, ಸ್ವತಂತ್ರವಾಗಿ ನಡೆದಾಡಲು ಇದು ಸಹಾಯ ಮಾಡುತ್ತದೆ ಎಂದು ವಿವರಿಸಿದರು.

ಮನೆ, ಕಚೇರಿ ಒಳಾಂಗಣದಲ್ಲಿ ಇದನ್ನು ಬಳಸಿ ಓಡಾಡಬಹುದು. ವ್ಯಕ್ತಿಯು ಬೆಳಕಿನಲ್ಲಿ ನಡೆಯುತ್ತಿರುವಾಗ ಆತ ನಿಂತಿರುವ ಸ್ಥಾನವನ್ನು ಅತಿ ನಿಖರವಾಗಿ ತ್ರೀಡಿ ಪೊಸಿಶನಿಂಗ್ ಮೂಲಕ ಗೊತ್ತುಪಡಿಸುತ್ತದೆ. ಅಲ್ಲದೆ ಪರಿಸರದಲ್ಲಿ ಇರುವ ವಸ್ತುಗಳ ಸ್ಥಾನ, ದೂರ ಇನ್ನಿತರ ಸೂಚನೆಗಳನ್ನು ನಿಖರವಾಗಿ ತಿಳಿಸುತ್ತದೆ. ಈ ಗ್ಲಾಸ್ ರಿಯಲ್ ಟೈಮ್ ಆ್ಯಕ್ಟಿವಿಟಿ ಮಾನಿಟರಿಂಗ್ ಮತ್ತು ಅಲರ್ಟ್ ಸಿಸ್ಟಮನ್ನೂ ಒಳಗೊಂಡಿದ್ದು, ಧರಿಸಿದ ವ್ಯಕ್ತಿಗೆ ತೊಂದರೆ ಉಂಟಾದಲ್ಲಿ ತತ್‌ಕ್ಷಣವೇ ವ್ಯಕ್ತಿಯ ಸಂಬಂಧಿಕರನ್ನು ಸಂಪರ್ಕಿಸುತ್ತದೆ ಎಂದು ಅವರು ತಿಳಿಸಿದರು.

### 3 ತಿಂಗಳಲ್ಲಿ ತಯಾರಿ

ಈ ಗ್ಲಾಸ್ ಆರ್‌ಡಿಎಲ್‌ನ ವಿಎಲ್‌ಸಿ ಪ್ರಯೋಗಶಾಲೆಯಲ್ಲಿ ಮೂರು ತಿಂಗಳ ಅವಧಿಯಲ್ಲಿ ತಯಾರಾಗಿದೆ. ರಾಘವ ಶೆಟ್ಟಿ ಅವರೊಂದಿಗೆ ಕನ್ವಲ್ ಕರ್ಕೇರ, ಡಾ| ಅಶ್ವತ್ ರಾವ್, ಡಾ| ಅನೂಶ್ ಬೇಕಲ್, ವಿಶ್ವನಾಥ್ ಆಚಾರ್ಯ, ಗಣೇಶ್ ಐತಾಳ್, ಪ್ರದೀಪ್ ಅವರ ತಂಡ ಈ ಕನ್ನಡಕ ಆವಿಷ್ಕರಿಸಿದ್ದಾರೆ. ಆರ್‌ಡಿಎಲ್ ತಂಡದ ಡಾ| ಅಶ್ವತ್ ರಾವ್, ಡಾ| ಅನೂಶ್ ಬೇಕಲ್, ಪ್ರೊ| ಮಂಜಪ್ಪ ಪ್ರೊ| ರವಿಚಂದ್ರ ಉಪಸ್ಥಿತರಿದ್ದರು.

www.varthabharati.in
ಜನದನಿಯ ಸಾರಥಿ
epaper.varthabharati.in

# ವಾರ್ತಾ ಭಾರತಿ


◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
4 ಆಗಸ್ಟ್ 2018
ಶನಿವಾರ
VARTHABHARATHI KANNADA DAILY
/Varthabharati
REGD.NO: MNG/958/2016-18 RNI NO. KAR KAN/2003/11378
ಸಂಪುಟ 15 ● ಸಂಚಿಕೆ 331 ● ಮಂಗಳೂರು ● ಪುಟ 1

CENTRAL LIBRARY

FOR COMPUTER
EYE TESTING &
QUALITY SPECTAC
Ph : 0824-247
0824-242
RUSSEL
Gousiya Complex, Opp.
Ashirvad Building, Near ICIC

# ಅಂಧರ ಬಾಳಿಗೆ ಹೊಸ ಬೆಳಕು ನೀಡುವ ವಿ.ಎಲ್.ಗ್ಲಾಸ್

## ಸಹ್ಯಾದ್ರಿ ಇನ್ನೋವೇಶನ್ ಹಬ್‌ನ ಆವಿಷ್ಕಾರ



ಮಂಗಳೂರು, ಆ.3: ಅಡ್ಯಾರ್‌ನಲ್ಲಿರುವ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನಿಂದ ಪ್ರವರ್ತಿಸಲ್ಪಡುತ್ತಿರುವ ಸಹ್ಯಾದ್ರಿ ಇನ್ನೊವೇಶನ್ ಹಬ್‌ನ ಆಶ್ರಯದಲ್ಲಿ ಆರ್‌ಡಿಎಲ್ ಟೆಕ್ನಾಲಜೀಸ್‌ನ ವಿಆರ್‌ಎಲ್ ಪ್ರಯೋಗ ಶಾಲೆಯಲ್ಲಿ ಅಂಧರಿಗೆ ಬೇಕಾಗ ಬಲ್ಲ ವಿ.ಎಲ್.ಗ್ಲಾಸ್‌ನ್ನು ಆವಿಷ್ಕಾರಿಸಲಾಗಿದೆ ಎಂದು ಕಾಲೇಜಿನ ಪ್ರಕಟನೆ ತಿಳಿಸಿದೆ.

ವಿ.ಎಲ್.ಗ್ಲಾಸ್(ವಿಸಿಬ್‌ಲ್ ಲೈಟ್ ಗ್ಲಾಸ್) ವಿಶಿಷ್ಟ ಕನ್ನಡಕವಾಗಿದ್ದು, ಅಂಧ, ದೃಷ್ಟಿಹೀನರಿಗೆ ಇದು ಪರಿಣಾಮಕಾರಿ ಸಂವಹನ ದೃಷ್ಟಿ ಮಾಧ್ಯಮವಾಗಲಿದೆ. ಈ ಕನ್ನಡಕವನ್ನು ಸಹ್ಯಾದ್ರಿ ಇನ್ನೊವೇಶನ್ ಹಬ್ ಪ್ರಾಯೋಜಿಸಿದೆ.

ಮಾ.26ರಂದು ಆರಂಭಗೊಂಡ ಆರ್‌ಡಿಎಲ್‌ನ ವಿಎಲ್‌ಸಿ ಪ್ರಯೋಗಶಾಲೆಯಲ್ಲಿ ಯುವ ವಿಜ್ಞಾನಿಗಳ ತಂಡವು ಆರ್‌ಡಿಎಲ್ ಟೆಕ್ನಾಲಜಿಯ ಮುಖ್ಯಸ್ಥ ರಾಘವ ಶೆಟ್ಟಿ ನೇತೃತ್ವದಲ್ಲಿ ಕೇವಲ 3 ತಿಂಗಳ ಅವಧಿಯಲ್ಲಿ ಈ ವಿ.ಎಲ್.ಗ್ಲಾಸ್‌ನ್ನು ಆವಿಷ್ಕರಿಸಿದ್ದಾರೆ.

ವಿ.ಎಲ್.ಗ್ಲಾಸ್ ಅತ್ಯಾಧುನಿಕ ತಂತ್ರಜ್ಞಾನವನ್ನೊಳಗೊಂಡ ಒಂದು ಸರಳ ಕನ್ನಡಕ. ವಿಶೇಷವಾಗಿ ತಯಾರಿಸಲ್ಪಟ್ಟ ಕನ್ನಡಕದ ಚೌಕಟ್ಟು (ಫ್ರೇಮ್). ಅದರ ಗಾಜುಗಳ ಜೋಡಣೆಯ ಚೌಕಟ್ಟಿನ (ಬ್ರಿಡ್ಜ್) ಒಳಗೆ ಪುಟ್ಟ ಸಂವೇದಕ (ಸೆನ್ಸಾರ್)ವಿದೆ. ಈ ಸಂವೇದಕವನ್ನು ವಿಐಎಲ್‌ಆರ್(ವಿಸಿಬ್‌ಲ್ ಲೈಟ್ ಇನ್ಫ್ರಾರೆಡ್ ರಿಸೀವರ್) ಎನ್ನುತ್ತಾರೆ. ಈ ಸಂವೇದಕವು ಎಲ್‌ಐಎಫ್‌ಐ ತಂತ್ರಜ್ಞಾನದ ಮೂಲಕ ಬೆಳಕಿನ ಅತಿ ಕೆಂಪು ಕಿರಣಗಳನ್ನು ಪಡೆಯುತ್ತದೆ. ಈ ಸಂಕೇತಗಳು ಕನ್ನಡಕದ ಎಡ ಬಲದ ಚೌಕಟ್ಟುಗಳಲ್ಲಿ ಅಳವಡಿಸಿದ ಕಂಪನಕಾರಕ(ವೈಬ್ರೇಟರ್)ಗಳ ಮೂಲಕ ಕನ್ನಡಕ ಧರಿಸಿದ ವ್ಯಕ್ತಿಗೆ ಎಚ್ಚರಿಕೆ ನೀಡುತ್ತದೆ. ಅಲ್ಲದೆ ಕನ್ನಡಕದ ಚೌಕಟ್ಟಿನ ಕೊನೆಯಲ್ಲಿ ಕಿವಿಯೊಳಗೆ ಧರಿಸುವಂತಹ ಇಯರ್ ಫೋನ್‌ಗಳ ಮೂಲಕ ಸಂದೇಶ ನೀಡುತ್ತದೆ. ಇದು ಅಂಧ ವ್ಯಕ್ತಿಯು ಯಾವುದೇ ಅಡೆತಡೆಗಳನ್ನು ಗ್ರಹಿಸಿ, ಯಾರದೇ ಸಹಾಯವಿಲ್ಲದೆ ಎಚ್ಚರಿಕೆಯಿಂದ ಸ್ವತಂತ್ರವಾಗಿ ನಡೆದಾಡಲು ಸಹಾಯ ಮಾಡುತ್ತದೆ ಎಂದು ಈ ಕನ್ನಡಕದ ಸಂಶೋಧನಾ ತಂಡ ಹೇಳಿದೆ.

ಎಲ್‌ಐಎಫ್‌ಐ ಬೆಳಕಿನ ಆವರ್ತನಗಳನ್ನಷ್ಟೇ ಅವಲಂಬಿಸಿ ಅಪಾಯಕಾರಿ ಆರ್‌ಎಫ್ ತರಂಗಗಳ ವಿಕಿರಣಗಳನ್ನು ನಿವಾರಿಸಿ ಸಂಶೋಧಿಸಿದ ತಂತ್ರಜ್ಞಾನವಾಗಿದೆ. ಈ ತಂತ್ರಜ್ಞಾನದಿಂದ ಆವಿಷ್ಕರಿಸಲ್ಪಟ್ಟ ವಿಎಲ್ ಗ್ಲಾಸ್‌ದೃಷ್ಟಿಹೀನರಿಗಾಗಿಯೇ ಸಿದ್ಧಪಡಿಸಲಾಗಿದೆ ಎಂದು ತಂಡ ತಿಳಿಸಿದೆ.

ಈ ಮಹತ್ವದ ಅನ್ವೇಷಣಾ ತಂಡದಲ್ಲಿ ಆರ್‌ಡಿಎಲ್ ಟೆಕ್ನಾಲಜಿಯ ಮುಖ್ಯಸ್ಥ ರಾಘವ ಶೆಟ್ಟಿ ವಸ್ತುವಿನ್ಯಾಸ ಕಲ್ಪನೆ ಹಾಗೂ ವ್ಯೂಹಾತ್ಮಕ ಪ್ರಸ್ತಾವ ಮಾಡಿದ್ದರೆ, ಕನ್ವಲ್ ಕರ್ಕೇರ ತಾಂತ್ರಿಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಅಶ್ವತ್ ರಾವ್ ಹಾಗೂ ಡಾ.ಅನೂಪ್ ಬೇಕಲ್ ಸಂವೇದಕ ತಯಾರಿಕೆಯ ಮಾರ್ಗದರ್ಶಕರಾಗಿದ್ದಾರೆ. ವಿಶ್ವನಾಥ್ ಆಚಾರ್ಯ ಮತ್ತು ಗಣೇಶ್ ಐತಾಳ್ ಕ್ಯಾಡ್ ಡಿಸೈನ್‌ನ ಸಹಾಯ ಕಲ್ಪಿಸಿದ್ದಾರೆ. ಪ್ರದೀಪ್ ಮೆಶಿನ್ ಲರ್ನಿಂಗ್‌ನಲ್ಲಿ ಸಹಕರಿಸಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.



www.vijaykarnataka.com
ಸಂಪುಟ: 18 | ಸಂಚಿಕೆ: 9
ಶನಿವಾರ,4 ಆಗಸ್ಟ್ 2018 | ಪುಟಗಳು: 14+4+4 | ಬೆಲೆ: ₹ 5.00
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |

Sahyadri College of Engineering & Management
CENTRAL LIBRARY
Mangaluru

ಅಮೆರಿಕ ಬಳಿಕ ಭಾರತದ ಚುನಾವಣೆ ಮೇಲೆ ಪ್ರಭಾವ ಬೀರಲು ರಷ್ಯಾ ಹ್ಯಾಕರ್‌ಗಳ ಕುತಂತ್ರ P01

ಸಾರ್ವಜನಿಕ ಆಕ್ಷೇಪದ ಹಿನ್ನೆಲೆಯಲ್ಲಿ ಸಾಮಾಜಿಕ ಮಾಧ್ಯಮ ನಿರ್ಬಂಧ ನೀತಿ ಹಿಂಪಡೆದ ಕೇಂದ್ರ ಸರಕಾರ

5 ವಿಕೆಟ್: 2ನೇ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ಬೆನ್ನೆಲುಬು ಮುರಿದ ಇಶಾಂತ್ ಶರ್ಮ

# ಸಹ್ಯಾದ್ರಿ ಕಾಲೇಜ್: ವಿಎಲ್ ಗ್ಲಾಸ್ ಪ್ರಾತ್ಯಕ್ಷಿಕೆ

## ಆರ್‌ಡಿಎಲ್ ಟೆಕ್ನಾಲಜೀಸ್ ಅಪೂರ್ವ ಅನ್ವೇಷಣೆ



ದೃಷ್ಟಿಹೀನ ವ್ಯಕ್ತಿಗಳಿಗೆ ಮಾರ್ಗದರ್ಶನ ನೀಡುವ ವಿ.ಎಲ್.(ವಿಸಿಬಲ್ ಲೈಟ್) ಗ್ಲಾಸ್ ಪ್ರಾತ್ಯಕ್ಷಿಕೆ ಶುಕ್ರವಾರ ಸಹ್ಯಾದ್ರಿ ಕಾಲೇಜ್‌ನಲ್ಲಿ ನಡೆಯಿತು.

■ **ವಿಕ ಸುದ್ದಿಲೋಕ** ಮಂಗಳೂರು

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜ್‌ನ ಸಹ್ಯಾದ್ರಿ ಇನ್ನೋವೇಶನ್ ಹಬ್ ಪ್ರಾಯೋಜಿತ ತಂತ್ರಜ್ಞಾನ ಸಂಸ್ಥೆ ಆರ್ ಡಿಎಲ್ ಟೆಕ್ನಾಲಜೀಸ್ ಅಭಿವೃದ್ಧಿ ಪಡಿಸಿದ ದೃಷ್ಟಿಹೀನ ವ್ಯಕ್ತಿಗಳಿಗೆ ಮಾರ್ಗ ದರ್ಶನ ನೀಡುವ ವಿ.ಎಲ್.(ವಿಸಿಬಲ್ ಲೈಟ್) ಗ್ಲಾಸ್ ಪ್ರಾತ್ಯಕ್ಷಿಕೆ ಶುಕ್ರವಾರ ಸಹ್ಯಾದ್ರಿ ಕಾಲೇಜ್‌ನಲ್ಲಿ ನಡೆಯಿತು.

ಆರ್‌ಡಿಎಲ್ ಮುಖ್ಯಸ್ಥ ರಾಘವ ಶೆಟ್ಟಿ ಅವಿಷ್ಕಾರದ ಬಗ್ಗೆ ಮಾಹಿತಿಯನ್ನು ನೀಡುತ್ತಾ ಮಾತನಾಡಿ, ಅಂಧ ವ್ಯಕ್ತಿಗಳಿಗೆ ಮಾರ್ಗದರ್ಶಕನಂತೆ ವಿಎಲ್ ಗ್ಲಾಸ್ ಕಾರ್ಯ ನಿರ್ವಹಿಸುತ್ತದೆ. ಸಿಂಕ್ ಮಾಡಿದ ಮಾಹಿತಿಯಿಂದ ಹಾಗೂ ಎಲ್‌ಇಡಿ ಬಲ್ಬ್‌ಗಳ ಕಿರಣದಿಂದ ಸ್ವಸ್ಥಾನವನ್ನು ಗುರುತಿಸಿ ಕಂಪನ ಹಾಗೂ ಇಯರ್ ಫೋನ್ ಮೂಲಕ ವ್ಯಕ್ತಿಗೆ ಮಾಹಿತಿಯನ್ನು ನೀಡುತ್ತದೆ ಅದರಿಂದ ಎದುರಾಗುವ ಅಪಾಯವನ್ನು ತಡೆಗಟ್ಟಬಹುದು ಎಂದರು.

ಈ ಸಂದರ್ಭ ಕಾಲೇಜ್‌ನ ವೈಸ್ ಪ್ರಿನ್ಸಿಪಾಲ್ ಎಸ್.ಎಸ್. ಬಾಲಕೃಷ್ಣ ಟ್ರಸ್ಟಿ ದೇವದಾಸ್ ಹೆಗ್ಡೆ, ಪ್ರಾಧ್ಯಾಪಕರಾದ ಡಾ. ಅಶ್ವಥ್ ರಾವ್, ಡಾ.ಅನೂಶ್ ಬೇಕಲ್, ಇಂಡಸ್ಟ್ರಿ ಕನೆಕ್ಟ್ ಡೀನ್ ರವಿಚಂದ್ರ, ಸಂಶೋಧನಾ ನಿರ್ದೇಶಕ ಮಂಜಪ್ಪ ಹಾಗೂ ಯುವ ವಿಜ್ಞಾನಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

### ವಿಎಲ್ ಗ್ಲಾಸ್ ಕಾರ್ಯ ಹೇಗೆ ?



ವಿಎಲ್ ಗ್ಲಾಸ್ ಒಂದು ಸರಳ ಕನ್ನಡಕವಾಗಿದ್ದು ಕನ್ನಡಕದ ಗಾಜಿನ ಬ್ರಿಡ್ಜ್ ಒಳಗಿರುವ ವಿಎಲ್‌ಐಆರ್ ಸಂವೇದಕ ಎಲ್‌ಐಎಫ್‌ಐ ತಂತ್ರಜ್ಞಾನದ ಮೂಲಕ ಅತಿ ಕೆಂಪು ಕಿರಣಗಳನ್ನು ಪಡೆದು ಎಡ ಬಲದ ಚೌಕಟ್ಟಿನಲ್ಲಿ ಅಳವಡಿಸಿದ ಕಂಪನಕಾರಕಗಳ ಮೂಲಕ ವ್ಯಕ್ತಿಗೆ ಎಚ್ಚರಿಕೆಯನ್ನು ನೀಡುತ್ತದೆ. ಅಲ್ಲದೆ ಕನ್ನಡಕದ ಫ್ರೇಮ್‌ನ ಕೊನೆಯಲ್ಲಿರುವ ಇಯರ್ ಫೋನ್ ಸಂದೇಶವನ್ನು ನೀಡುತ್ತದೆ. ಒಳಾಂಗಣದಲ್ಲಿ ಬೆಳಕಿನ ಕಿರಣಗಳ ಅಡಿಯಲ್ಲಿ ನಿಂತಿರುವಾಗ ತ್ರಿ ಡಿ ಪೊಸಿಶನಿಂಗ್ ಮೂಲಕ ಅತಿ ನಿಖರವಾಗಿ ಸ್ಥಾನವನ್ನು ಗೊತ್ತುಪಡಿಸುತ್ತದೆ. ಅಲ್ಲದೆ ಕನ್ನಡಕದಲ್ಲಿ ಅಳವಡಿಸಲಾದ ರಿಯಲ್ ಟೈಮ್ ಆಕ್ಟಿವಿಟಿ ಮಾನಿಟರಿಂಗ್ ಹಾಗೂ ಅಲರ್ಟ್ ಸಿಸ್ಟಂನಿಂದಾಗಿ ವ್ಯಕ್ತಿ ಯಾವುದೇ ತೊಂದರೆಗೊಳಗಾದರೆ ತಕ್ಷಣ ಸಂಬಂಧಿಕರನ್ನು ಸಂಪರ್ಕಿಸುತ್ತದೆ. ಅಂಧ ವ್ಯಕ್ತಿ ಅಡೆತಡೆಗಳನ್ನು ಗ್ರಹಿಸಿ ಯಾರದೇ ಸಹಾಯವಿಲ್ಲದೆ ಎಚ್ಚರಿಕೆಯಿಂದ ಸ್ವತಂತ್ರವಾಗಿ ನಡೆದಾಡಲು ಸಹಾಯ ಮಾಡುತ್ತದೆ ಅಂಧರ ಬಾಳಿಗೆ ಆಪ್ತ ಸಹಾಯಕನಂತೆ ಕಾರ್ಯ ನಿರ್ವಹಿಸಲಿದೆ ಎಂದು ರಾಘವ ಶೆಟ್ಟಿ ಹೇಳುತ್ತಾರೆ.